JULY 03, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

<><><>

- ಪ್ರಧಾನಮಂತ್ರಿ ಮಿತ್ರ ಪಾರ್ಕ್ ಯೋಜನೆಯಡಿ, ಕಲಬುರಗಿಯಲ್ಲಿ, ಜವಳಿ ಪಾರ್ಕ್; ಸಚಿವ ಸಂಪುಟ ನಿರ್ಧಾರ.
- ಡಿಜಿಟಲ್ ಇಂಡಿಯಾ ಯೋಜನೆಗೆ, 11 ವರ್ಷ ಪೂರ್ಣ; ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಸೇವೆಗಳು, ಸಂಪೂರ್ಣ ಡಿಜಿಟಲೀಕೃತ.
- ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ; ಪಡಿತರ ಅಕ್ಕಿಯ ಗುಣಮಟ್ಟಕ್ಕೆ, ಕೇಂದ್ರದ ಆದ್ಯತೆ.
- ಇಂದು, ಅಂತಾರಾಷ್ಟ್ರೀಯ ಪ್ಲಾಸ್ಟಿಕ್ ಚೀಲ ಮುಕ್ತತೆ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಕಲಬುರಗಿ ಜಿಲ್ಲೆ, ನಂದಿ ಸಿನ್ನೂರ ಬಳಿ, ಕಿರಣಗಿ ಗ್ರಾಮದ, ಸಾವಿರ ಎಕರೆ ಪ್ರದೇಶದಲ್ಲಿ, ಪ್ರಧಾನಮಂತ್ರಿ ಮಿತ್ರ ಪಾರ್ಕ್ ಯೋಜನೆಯಡಿ, 500 ಕೋಟಿ ರೂಪಾಯಿ ಬಂಡವಾಳದೊಂದಿಗೆ, ರಾಜ್ಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ, ಜವಳಿ ಪಾರ್ಕ್ ಅಭಿವೃದ್ಧಿಪಡಿಸಲು, ಸಚಿವ ಸಂಪುಟ ಸಭೆ ನಿರ್ಧರಿಸಿದೆ. ಗೃಹ ಖಾತೆ ಸಚಿವ, ಪ್ರಿಯಾಂಕ ಖರ್ಗೆ, ಎಕ್ಸ್ ಮಾಧ್ಯಮದಲ್ಲಿ ಈ ಮಾಹಿತಿ ನೀಡಿ, ಸಾವಿರದ 700 ಕೋಟಿ ರೂಪಾಯಿ ಯೋಜನಾ ವೆಚ್ಚದೊಂದಿಗೆ, ಜವಳಿ ಪಾರ್ಕ್ ಸ್ಥಾಪನೆಯಾಗಲಿದೆ. 320 ಕೋಟಿ ರೂಪಾಯಿ ವೆಚ್ಚದಲ್ಲಿ, ಮೊದಲ ಹಂತದ ಅಭಿವೃದ್ಧಿ ಕಾರ್ಯಗಳನ್ನು, ಕೈಗೆತ್ತಿಕೊಳ್ಳಲಾಗುವುದು ಎಂದಿದ್ದಾರೆ. ಜವಳಿ ಪಾರ್ಕ್ 1 ಲಕ್ಷ ಜನರಿಗೆ, ನೇರ ಉದ್ಯೋಗ ಹಾಗೂ 2 ಲಕ್ಷ ಜನರಿಗೆ, ಪರೋಕ್ಷ ಉದ್ಯೋಗಾವಕಾಶ ಒದಗಿಸುವ ನಿರೀಕ್ಷೆ ಇದೆ.

<><><>

ಡಿಜಿಟಲ್ ಇಂಡಿಯಾ ಯೋಜನೆ, ದೇಶದ ಆಡಳಿತಕ್ಕೆ ಹೊಸ ಭಾಷ್ಯ ಬರೆದಿದ್ದು, ನಾಗರಿಕರನ್ನು ಸಬಲೀಕರಿಸಿದೆ; ಸರ್ವಾಂಗೀಣ ಅಭಿವೃದ್ಧಿಯ ವೇಗವರ್ಧಿಸಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ತಿಳಿಸಿದ್ದಾರೆ. ಡಿಜಿಟಲ್ ಇಂಡಿಯಾ ಯೋಜನೆಗೆ 11 ವರ್ಷಗಳು ಪೂರ್ಣಗೊಂಡ ಹಿನ್ನೆಲೆ, ಎಕ್ಸ್ ಮಾಧ್ಯಮದಲ್ಲಿ ಅವರು ಪ್ರತಿಕ್ರಿಯಿಸಿ, ಡಿಜಿಟಲ್ ಇಂಡಿಯಾ, ದೇಶದ ಆರ್ಥಿಕತೆಯ ಭದ್ರ ಬುನಾದಿಯಾಗಿದೆ, ಎಂದಿದ್ದಾರೆ.

<><><>

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಧಾರವಾಡ ಜಿಲ್ಲೆಯ, ಹುಬ್ಬಳ್ಳಿಯಲ್ಲಿ, ಕೇಂದ್ರ ಕಚೇರಿ ಹೊಂದಿದ್ದು, ತನ್ನೆಲ್ಲ ಸೇವೆಗಳನ್ನು ಸಂಪೂರ್ಣ ಡಿಜಿಟಲೀಕೃತ ಗೊಳಿಸಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ವ್ಯವಸ್ಥಾಪಕ ನಿರ್ದೇಶಕರಾದ, ಎಂ. ಪ್ರಿಯಾಂಗಾ.

<><><>

ಎಂ. ಪ್ರಿಯಾಂಗಾ ಧ್ವನಿ 56 ಸೆಕೆಂದುಗಳು

<><><>

ಹೊಸ ದಿಲ್ಲಿಯಲ್ಲಿ ಇಂದು, ಎಲ್ಲ ರಾಜ್ಯಗಳ ಪಂಚಾಯಿತಿರಾಜ್ ಹಾಗೂ ಗ್ರಾಮಿಣಾಭಿವೃದ್ಧಿ ಸಚಿವರುಗಳ ಸಭೆ ಆಯೋಜಿತವಾಗಿದೆ. 16ನೇ ಹಣಕಾಸು ಆಯೋಗದ ಶಿಫಾರಸುಗಳ, ಅನುಷ್ಟಾನ ಮಾರ್ಗಸೂಚಿಗಳ ಬಗ್ಗೆ, ಚರ್ಚೆ ನಡೆಯಲಿದೆ. ಸಚಿವ ಈಶ್ವರ ಖಂಡ್ರೆ ಈ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಕಳೆದ, 2025–26ನೇ ಸಾಲಿಗೆ, 15ನೇ ಹಣಕಾಸು ಆಯೋಗದ, ರಾಜ್ಯದ ಪಾಲಿನ ಅನುದಾನ, 2 ಸಾವಿರದ 186 ಕೋಟಿ ರೂಪಾಯಿ ಬಾಕಿ ಇದೆ. ಕೂಡಲೇ ಬಿಡುಗಡೆ ಮಾಡುವಂತೆ, ಸಭೆಯಲ್ಲಿ ಕೇಂದ್ರವನ್ನು ಒತ್ತಾಯಿಸುವುದಾಗಿ, ಸಚಿವ ಖಂಡ್ರೆ ತಿಳಿಸಿದ್ದಾರೆ.

<><><>

ಭಾರತ ಚುನಾವಣಾ ಆಯೋಗ, ರಾಜ್ಯದಲ್ಲಿ ಕೈಗೊಂಡಿರುವ, ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ, ಪಾರದರ್ಶಕ ಮತ್ತು ವ್ಯವಸ್ಥಿತವಾಗಿ ನಡೆಯುತ್ತಿದ್ದು, ಸಾರ್ವಜನಿಕರು, ಮಾಹಿತಿ ನೀಡಿ ಸಹಕರಿಸುವಂತೆ, ರಾಜ್ಯ ಮುಖ್ಯ ಕಾರ್ಯದರ್ಶಿ ಡಾಕ್ಟರ್ ಶಾಲಿನಿ ರಜನೀಶ ಮನವಿ ಮಾಡಿದ್ದಾರೆ. ಬೆಂಗಳೂರಿನ ತಮ್ಮ ಸ್ವಗೃಹದಲ್ಲಿ, ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆಯಲ್ಲಿ ಪಾಲ್ಗೊಂಡು, ಎಲ್ಲಾ ಮೂರು ಪ್ರಮುಖ ನಮೂನೆಗಳನ್ನು ಸ್ವತಃ ಭರ್ತಿ ಮಾಡಿ, ನಿಯೋಜಿತ ಬೂತ್ ಮಟ್ಟದ ಅಧಿಕಾರಿಗಳಿಗೆ ಸಲ್ಲಿಸಿದರು. ನಿಗದಿತ ಅವಧಿಯಲ್ಲಿ ಪರಿಷ್ಕರಣೆ ಪೂರ್ಣಗೊಳ್ಳಲು, ಮತದಾರರ ಸಹಕಾರ ಅಗತ್ಯ, ಎಂದರು.

<><><>

ಬೀದರ ಜಿಲ್ಲೆಯಲ್ಲಿ, ಮತದಾರರ ಪಟ್ಟಿಯ, ವಿಶೇಷ ಸಮಗ್ರ ಪರಿಷ್ಕರಣೆ, ಮನೆ ಭೇಟಿ ಹಿನ್ನೆಲೆ, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಕಾಡವಾದ ಹಾಗೂ ಕಮಠಾಣ ಗ್ರಾಮಗಳಿಗೆ ಭೇಟಿ ನೀಡಿ, ಎನ್ಯುಮರೇಷನ್ ಕಾರ್ಯ ಪರಿಶೀಲಿಸಿದರು.

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ, ವಿತರಿಸಲಾಗುತ್ತಿರುವ ಅಕ್ಕಿಯ, ಗುಣಮಟ್ಟ ಕಾಪಾಡಲು, ಆದ್ಯತೆ ನೀಡಲಾಗಿದೆ ಎಂದು, ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವ, ಪ್ರಲ್ಹಾದ ಜೋಶಿ ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ದೇಶದ 80 ಕೋಟಿಗೂ ಹೆಚ್ಚು ಫಲಾನುಭವಿಗಳಿಗೆ, ಉತ್ತಮ ಗುಣಮಟ್ಟದ ಆಹಾರ ಪೂರೈಸುವ ಗುರಿ ಹೊಂದಲಾಗಿದೆ. ಪಡಿತರದಲ್ಲಿ, ಸಂಸ್ಕರಿಸದ ಅಕ್ಕಿ – ರಾ ರೈಸ್‌ನಲ್ಲಿ ಈ ಮೊದಲು ಶೇಕಡ 25ರಷ್ಟಿದ್ದ ನುಚ್ಚಿನ ಪ್ರಮಾಣವನ್ನು, ಶೇಕಡ 10ಕ್ಕೆ ಇಳಿಸಲಾಗಿದೆ. ಬೇಯಿಸಿದ ಅಕ್ಕಿಯಲ್ಲಿ, ನುಚ್ಚಿನ ಪ್ರಮಾಣವನ್ನು ಶೇಕಡ 5ಕ್ಕೆ ಇಳಿಸಲು ಕ್ರಮ ವಹಿಸಲಾಗಿದೆ ಎಂದಿದ್ದಾರೆ. ಪಡಿತರ ವ್ಯವಸ್ಥೆಯಲ್ಲಿ ಪಾರದರ್ಶಕತೆ, ಪಡಿತರ ವಿತರಣೆಯಲ್ಲಿ ಕ್ಯೂ.ಆರ್. ಕೋಡ್ ಅಳವಡಿಕೆ, ವ್ಯವಸ್ಥಿತ ವೆಚ್ಚ ನಿರ್ವಹಣೆ ಮೂಲಕ, ದಕ್ಷತೆಯನ್ನು ಸುಧಾರಿಸಲಾಗುತ್ತಿದೆ ಎಂದು, ಸಚಿವ ಜೋಶಿ ಹೇಳಿದ್ದಾರೆ.

<><><>

"ಏಕ–ಬಳಕೆಯ ಪ್ಲಾಸ್ಟಿಕ್‌ಗಳಿಂದ ಮುಕ್ತಿ: ಸುಸ್ಥಿರ ಭವಿ ್ಯದ ಕಡೆಗೆ" ಎಂಬ ಧ್ಯೇಯದೊಂದಿಗೆ, ಇಂದು, ಅಂತಾರಾಷ್ಟ್ರೀಯ ಪ್ಲಾಸ್ಟಿಕ್ ಚೀಲ ಮುಕ್ತ ದಿನವನ್ನು ಆಚರಿಸಲಾಗುತ್ತಿದೆ. ಒಂದೇ ಬಾರಿ ಬಳಸಿ, ಬಿಸಾಡುವ ಪ್ಲಾಸ್ಟಿಕ್ ಚೀಲಗಳು, ಪರಿಸರದ ಮೇಲೆ ಉಂಟುಮಾಡುವ, ಅಪಾಯಗಳ ಬಗ್ಗೆ ಜಾಗೃತಿ ಮೂಡಿಸಲು, ಈ ದಿನ ಮೀಸಲಾಗಿದೆ. ಪ್ರಸಕ್ತ 2026ರಲ್ಲಿ, ಪ್ಲಾಸ್ಟಿಕ್ ತ್ಯಾಜ್ಯವನ್ನು ನಿಗ್ರಹಿಸಿ, ವನ್ಯಜೀವಿಗಳನ್ನು ರಕ್ಷಿಸುವ ಮತ್ತು ಸ್ವಚ್ಛ ಭವಿ ್ಯಕ್ಕಾಗಿ, ಸುಸ್ಥಿರ ಅಭ್ಯಾಸಗಳನ್ನು ಸೃಷ್ಟಿಸುವ, ತುರ್ತು ಅಗತ್ಯದ ಕುರಿತು, ಜನ ಜಾಗೃತಿ ಮೂಡಿಸಲಾಗುತ್ತಿದೆ.

<><><>

ಖ್ಯಾತ ರಂಗಕರ್ಮಿ ಪ್ರಸನ್ನ ನೇತೃತ್ವದ, ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು, ಭೀಮನಕೋಣೆಯ ಚರಕ ಸಂಸ್ಥೆಯ, ಅಂಗ ಸಂಸ್ಥೆಯಾದ, ಧಾರವಾಡದ ದೇಸಿ ಮಳಿಗೆ, ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ಸಂಪೂರ್ಣ ವರ್ಜಿಸಿದ್ದು, ಕಾಗದ ಹಾಗೂ ಹತ್ತಿ ಬಟ್ಟೆಯ ಚೀಲಗಳನ್ನು ಮಾತ್ರ, ಬಳಸುತ್ತದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ದೇಸಿ ವ್ಯವಸ್ಥಾಪಕರಾದ, ಸುನಂದಾ ಪ್ರಕಾಶ ಭಟ್.

<><><>

ಸುನಂದಾ ಭಟ್ ಧ್ವನಿ 26 ಸೆಕೆಂದುಗಳು

<><><>

ಅಗ್ರ ಶ್ರೇಯಾಂಕಿತ, ಬೆಂಗಳೂರಿನ ಕೆ.ಜೆ.ಆಕಾಶ, ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ, ಪುರುಷರ ಸಿಂಗಲ್ಸ್ ವಿಭಾಗದ, ಪ್ರಶಸ್ತಿ ಗೆದ್ದರು. ದಕ್ಷಿಣಕನ್ನಡ ಜಿಲ್ಲೆ, ಕೊಟ್ಟಾರದ ಮದುಕೋಡಿಯ, ಮಂಗಳೂರು ಟೆನಿಸ್ ಅಕಾಡೆಮಿಯಲ್ಲಿ ನಡೆದ ಅಂತಿಮ ಪಂದ್ಯದಲ್ಲಿ, ಮೂರನೇ ಶ್ರೇಯಾಂಕಿತ, ಬೆಂಗಳೂರಿನ ಸಂಜಯ್ ಮಾಧವನ್ ವಿರುದ್ಧ, ಆಕಾಶ, ಜಯ ಸಾಧಿಸಿದರು.

<><><>

ಶಿವಮೊಗ್ಗ ಯೋಧಾಸ್ ತಂಡದ ನಾಯಕ ಆರ್. ಸ್ಮರಣ ಹಾಗೂ ಕೆ.ವಿ.ಅನೀಶ ಅವರ ಶತಕದ ಜೊತೆಯಾಟದಿಂದ, ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡವನ್ನು, 7 ವಿಕೆಟ್‌ಗಳಿಂದ ಮಣಿಸಿ, ಶಿವಮೊಗ್ಗ ತಂಡ, ಎರಡನೇ ಸ್ಥಾನಕ್ಕೇರಿದೆ.

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ರಾಜನಗರದ, ಕೆ.ಎಸ್.ಸಿ.ಎ ಮೈದಾನದಲ್ಲಿ ಜರುಗಿದ, ಮಹಾರಾಜ ಕಪ್ ಟಿ–20 ಕ್ರಿಕೆಟ್, ಎರಡನೇ ಪಂದ್ಯದಲ್ಲಿ, ಮಂಗಳೂರು ತಂಡ ನೀಡಿದ, 163 ರನ್ ಗಳ ಗುರಿಯನ್ನು, ಶಿವಮೊಗ್ಗ ತಂಡ, 18 ದಶಾಂಶ 2 ಓವರುಗಳಲ್ಲಿ, 165 ರನ್ ಗಳಿಸಿ, ಜಯಿಸಿತು.

<><><>

ಹುಬ್ಬಳ್ಳಿ ಟೈಗರ್ಸ್ ಮತ್ತು ಮೈಸೂರು ವಾರಿಯರ್ಸ್ ನಡುವಿನ ಪಂದ್ಯ, ಮಳೆಯಿಂದ ರದ್ದಾದ ಪರಿಣಾಮ, ತಲಾ 1 ಅಂಕ ನೀಡಲಾಗಿದೆ.

<><><>

ಸಂಕ್ಷಿಪ್ತ ಸುದ್ದಿಗಳು:

<><><>

ಬೆಳಗಾವಿ ಜಿಲ್ಲೆ, ಖಾನಾಪುರ ತಾಲೂಕಿನ, ಪಶ್ಚಿಮಘಟ್ಟ ಪ್ರದೇಶದಲ್ಲಿ, ಮಳೆ ಹೆಚ್ಚಿದ್ದು, ಸಾರ್ವಜನಿಕ ಸುರಕ್ಷತೆಗಾಗಿ, ಬೆಳಗಾವಿ ಅರಣ್ಯ ವಲಯ ಹಾಗೂ ಜಲಪಾತಗಳಿಗೆ ಪ್ರವೇಶವನ್ನು ನಿ ೀಧಿಸಲಾಗಿದೆ.

<><><>

ಈ ತಿಂಗಳ ಮೊದಲ ವಾರ, ವನ ಮಹೋತ್ಸವ ಸಾಪ್ತಾಹಿಕವಾಗಿ, ಆಚರಿಸಲಾಗುತ್ತಿದೆ. ಮರಗಳ ಮಹತ್ವ, ಭೂ ಗ್ರಹದ ಹಸಿರು ಆವರಣ ಹೆಚ್ಚಿಸಲು, ಸಾಂಘಿಕ ಪ್ರಯತ್ನವನ್ನು, ಪ್ರೋತ್ಸಾಹಿಸುತ್ತದೆ.

<><><>

ಭಾರತೀಯ ಕ್ರೈಸ್ತರ ದಿನದ ಪ್ರಯುಕ್ತ, ಚಿಕ್ಕಬಳ್ಳಾಪುರದ ಬಿ.ಆರ್.ಅಂಬೇಡ್ಕರ ಭವನದಲ್ಲಿ, ಡಯೋಸಿಸ್ ಆಫ್ ಆಲ್ ಪ್ರೊಟೆಸ್ಟೆಂಟ್ ಚರ್ಚಸ್, ಇಂದು ಸ್ವಯಂ ಪ್ರೇರಿತ ರಕ್ತದಾನ ಶಿಬಿರ, ಆಯೋಜಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕಲಬುರಗಿ ಜಿಲ್ಲೆಯಲ್ಲಿ, ಪ್ರಧಾನಮಂತ್ರಿ ಮಿತ್ರ ಪಾರ್ಕ್ ಯೋಜನೆಯಡಿ, ಜವಳಿ ಪಾರ್ಕ್; ಸಚಿವ ಸಂಪುಟ ನಿರ್ಧಾರ.
- ಡಿಜಿಟಲ್ ಇಂಡಿಯಾ ಯೋಜನೆಗೆ, 11 ವರ್ಷ ಪೂರ್ಣ; ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಸೇವೆಗಳು, ಸಂಪೂರ್ಣ ಡಿಜಿಟಲೀಕೃತ.
- ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ; ಪಡಿತರ ಅಕ್ಕಿಯ ಗುಣಮಟ್ಟಕ್ಕೆ, ಕೇಂದ್ರದ ಆದ್ಯತೆ.
- ಇಂದು, ಅಂತಾರಾಷ್ಟ್ರೀಯ ಪ್ಲಾಸ್ಟಿಕ್ ಚೀಲ ಮುಕ್ತ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>